ಕರ್ನಾಟಕ ಸರ್ಕಾರ

(ಜಲಾನಯನ ಅಭಿವೃದ್ಧಿ ಇಲಾಖೆ)

ಸಂ: ಜಅಇ/ಉಕೃನಿ/ಜಕೋ/ಕೃಅ2/WDDP/22/20-21

ಆಯುಕ್ತರ ಕಾರ್ಯಾಲಯ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ,ಕೆ.ಎಚ್.ಬಿ. ಸಂಕೀರ್ಣ
ಕಾವೇರಿ ಭವನ, ಕೆ.ಜಿ.ರೋಡ್
ಬೆಂಗಳೂರು-560009
ದಿನಾಂಕ:30.07.2020

## ಕಛೇರಿ ಆದೇಶ

ವಿಷಯ: ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದಡಿ 2020-21 ನೇ ಸಾಲಿನ ಮೊದಲ ಕಂತಿನ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಕೃಇ/49/ಕೃಯೋಕಾ/2019, ಬೆಂಗಳೂರು, ದಿನಾಂಕ:05.11.2019.
2. ಜಅಇ/ಉಕೃನಿ/ಕೃಅ2/SWP/116/18-19. ದಿನಾಂಕ:19.12.2019
3. ದಿನಾಂಕ:23.03.2020 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಹಾಗೂ ಕೃಷಿ ಉತ್ಪನ್ನ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಗಳು
4. ಜಅಇ/ಉಕೃನಿ/ಕೃಅ2/WDDP/11(P)/20-21, 17.07.2020
5. ಸರ್ಕಾರದ ಆದೇಶ ಸಂಖ್ಯೆ; ಆಇ/02/ಟಿ.ಎಫ್.ಪಿ/2020 ದಿನಾಂಕ:30.05.2020
6. ಸರ್ಕಾರದ ಆದೇಶ ಸಂಖ್ಯೆ:AGRI-AML/109/2020 P(1) , ದಿನಾಂಕ:29.7.2020.
7. ಈ ಕಛೇರಿಯ ಪತ್ರದ ಸಂಖ್ಯೆ: ಜಅಇ/ಮುಅಸಂ/ನೆಡುತೋಪು ಕಾರ್ಯಕ್ರಮ/ 2020-21, ದಿನಾಂಕ:09.07.2020

******

ಪ್ರಸ್ತಾವನೆ:-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ (1) ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿ ಜಲಾನಯನ ಉಪಚಾರಕ್ಕೆ ಬಾಕಿ ಲಭ್ಯವಿರುವ ಮಳೆಯಾಶ್ರಿತ ಪ್ರದೇಶದಲ್ಲಿ 2019-20 ನೇ ಸಾಲಿನಿಂದ 2023-24ನೇ ಸಾಲಿನವರೆಗೆ, ಆಯ್ದ 100 ಬರಪೀಡಿತ ಮತ್ತು ಅತೀ ಹೆಚ್ಚು ಅಂತರ್ಜಲ ಶೋಷಿತ ತಾಲ್ಲೂಕುಗಳಲ್ಲಿ, ಪ್ರತಿ ತಾಲ್ಲೂಕಿನಲ್ಲಿ 3,000 ರಿಂದ 5,000 ಹೆಕ್ಟೇರ್ ಪ್ರದೇಶವನ್ನು ವಿಶ್ವಬ್ಯಾಂಕ್ ನೆರವಿನ ಸುಜಲಾ-III ಮಾದರಿಯ ಭೂ ಸಂಪನ್ಮೂಲ ಹಾಗೂ ಜಲಸಂಪನ್ಮೂಲ ಸಮೀಕ್ಷೆಯ ಮಾಹಿತಿಗಳನ್ನಾಧರಿಸಿ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣ ಜಲಾನಯನ ಉಪಚಾರದ ವಿಧಾನದಲ್ಲಿ **ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತ್ರಿ ಯೋಜನೆ, ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ** ಕಾರ್ಯಕ್ರಮದೊಡನೆ ಹಾಗೂ ಇತರೆ ಇಲಾಖೆಗಳ ಯೋಜನೆಗಳೊಂದಿಗೆ ಒಗ್ಗೂಡಿಸಿ ಬರ ನಿರೋಧಕ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡಲು ಸೂಚಿಸಿದೆ.

ಮಾ. ಕೆ. ಶಾ.
30/7/20

ಮುಂದುವರೆದು ದಿನಾಂಕ:23.03.2020 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದ ಉಸ್ತುವಾರಿ ಮತ್ತು ಮೇಲ್ವಿಚಾರಣೆಗೆ ರಚಿಸಿರುವ ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯ ಸಭೆಯಲ್ಲಿ (ಉಲ್ಲೇಖ-3), 2020-21 ನೇ ಸಾಲಿನಲ್ಲಿ ರೂ.5000.00 ಲಕ್ಷಗಳ ಅನುದಾನದಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕೆ ಅನುಮತಿ ನೀಡಲಾಗಿದೆ. ಉಲ್ಲೇಖಿತ ಪತ್ರ (4) ರಲ್ಲಿ ಸದರಿ ಯೋಜನೆಯಡಿ ಕೈಗೊಳ್ಳಬೇಕಾದ ಪರಿಷ್ಕೃತ ಚಟುವಟಿಕೆಗಳಿಗೆ ಅಧ್ಯಕ್ಷರು, ರಾಜ್ಯ ಮಟ್ಟದ ನೋಡಲ್ ಏಜೆನ್ಸಿ ರವರು ಅನುಮತಿಸಿರುತ್ತಾರೆ.

ಉಲ್ಲೇಖಿತ ಪತ್ರ (6) ರ ಸರ್ಕಾರದ ಆದೇಶದಲ್ಲಿ **ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದ** ಅನುಷ್ಠಾನಕ್ಕೆ ಮೊದಲ ಕಂತಿನ ಅನುದಾನವಾಗಿ ಲೆಕ್ಕಶೀರ್ಷಿಕೆ: 4402-00-102-0-05 ಅಡಿ ರೂ.1250.00 ಲಕ್ಷಗಳ ಅನುದಾನವನ್ನು ಯೋಜನೆಯ ಅನುಷ್ಠಾನಕ್ಕಾಗಿ ಜಲಾನಯನ ಅಭಿವೃದ್ಧಿ ಇಲಾಖೆಗೆ ಸರ್ಕಾರದಿಂದ ಬಿಡುಗಡೆಗೊಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ **ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ** ಯೋಜನೆಯಡಿ ಈ ಕೆಳಕಂಡಂತೆ ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡಲು ಆದೇಶ ಹೊರಡಿಸಲಾಗಿದೆ.

## ಆದೇಶ

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದಡಿ ಒಟ್ಟು ರೂ. 1250.00 ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ:4402-00-102-0-05 ರಡಿ ಕೆಳಕಂಡಂತೆ ಜಿಲ್ಲೆಗಳಿಗೆ ಬಿಡುಗಡೆ ಮಾಡಿ **(ತಾಲ್ಲೂಕುವಾರು ಮತ್ತು ಘಟಕವಾರು ಅನುದಾನ ಬಿಡುಗಡೆಯ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ)** 2020-21 ನೇ ಸಾಲಿನ ಕ್ರಿಯಾ ಯೋಜನೆಯ ಪ್ರಕಾರ ನಿಯಮಾನುಸಾರ ಭರಿಸಲು ಸೂಚಿಸಿದೆ.

ರೂ.ಲಕ್ಷಗಳಲ್ಲಿ

| ಕ್ರ ಸಂ | ಜಿಲ್ಲೆ | ಬಿಡುಗಡೆ ಮಾಡಲಾದ ಅನುದಾನ ಲೆಕ್ಕ ಶೀರ್ಷಿಕೆ: 4402-00-102-0-05 (ಉಪ ಶೀರ್ಷಿಕೆ 059) |
|---|---|---|
| 1 | 2 | 3 |
| 1 | ಬಾಗಲಕೋಟೆ | 17.78 |
| 2 | ಬೆಂಗಳೂರು ಗ್ರಾಮಾಂತರ | 17.71 |
| 3 | ಬೆಳಗಾವಿ | 55.51 |
| 4 | ಬಳ್ಳಾರಿ | 53.09 |
| 5 | ಬೀದರ್ | 44.63 |
| 6 | ವಿಜಯಾಪುರ | 53.95 |
| 7 | ಚಾಮರಾಜನಗರ | 22.67 |
| 8 | ಚಿಕ್ಕಬಳ್ಳಾಪುರ | 145.03 |
| 9 | ಚಿಕ್ಕಮಗಳೂರು | 22.04 |
| 10 | ಚಿತ್ರದುರ್ಗ | 47.96 |
| 11 | ದಕ್ಷಿಣ ಕನ್ನಡ | 29.62 |
| 12 | ದಾವಣಗೆರೆ | 52.37 |
| 13 | ಧಾರವಾಡ | 25.42 |

| 1 | 2 | 3 |
|---|---|---|
| 14 | ಗದಗ | 35.60 |
| 15 | ಕಲಬುರಗಿ | 60.25 |
| 16 | ಹಾಸನ | 51.79 |
| 17 | ಹಾವೇರಿ | 69.60 |
| 18 | ಕೊಡಗು | 9.47 |
| 19 | ಕೋಲಾರ | 71.43 |
| 20 | ಕೊಪ್ಪಳ | 35.01 |
| 21 | ಮಂಡ್ಯ | 26.83 |
| 22 | ಮೈಸೂರು | 44.62 |
| 23 | ರಾಯಚೂರು | 51.80 |
| 24 | ರಾಮನಗರ | 23.15 |
| 25 | ಶಿವಮೊಗ್ಗ | 57.41 |
| 26 | ತುಮಕೂರು | 74.20 |
| 27 | ಉಡುಪಿ | 28.22 |
| 28 | ಉತ್ತರ ಕನ್ನಡ | 12.83 |
| 29 | ಯಾದಗಿರಿ | 10.01 |
| | **ಜಿಲ್ಲಾ ಒಟ್ಟು** | **1250.00** |

ಈ ಮೇಲಿನಂತೆ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡ ನಿಯಮ ಮತ್ತು ಷರತ್ತುಗಳ ಪ್ರಕಾರ ವೆಚ್ಚ ಭರಿಸಲು ಕ್ರಮವಹಿಸುವುದು.

1. ಬಿಡುಗಡೆಯಾದ ಅನುದಾನವನ್ನು ಕೆಟಿಪಿಪಿ (KTPP) ಪಾರದರ್ಶಕ ನಿಯಮಗಳ ಪ್ರಕಾರ ವೆಚ್ಚ ಭರಿಸುವುದು.
2. ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದ ಕಾರ್ಯಚರಣೆ ಕೈಪಿಡಿ (ಉಲ್ಲೇಖ-2) ಹಾಗೂ ಕೇಂದ್ರ ಕಚೇರಿಯಿಂದ ಯೋಜನೆಯ ಅನುಷ್ಠಾನದ ಕುರಿತು ಈಗಾಗಲೇ ನೀಡಲಾದ ಸೂಚನೆಗಳ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದು.
3. ಜಲಾನಯನ ಚಟುವಟಿಕೆ/ಕಾಮಗಾರಿಗಳನ್ನು ಅನುಮೋದಿತ ಜಲಾನಯನ ಪ್ರದೇಶ ಮತ್ತು ಕಿರು ಜಲಾನಯನಗಳ ವ್ಯಾಪ್ತಿಯಲ್ಲಿಯೇ ಮಾತ್ರ ಅನುಷ್ಠಾನ ಮಾಡುವುದು (Watershed activities should be implemented within the approved project area).
4. ಪ್ರಸಕ್ತ ಸಾಲಿನಲ್ಲಿ ಈ ಕಾರ್ಯಕ್ರಮದ ಪೂರ್ವಸಿದ್ದತಾ ಹಂತದ ಚಟುವಟಿಕೆಗಳಾದ ಪ್ರಾಥಮಿಕ ಸಮೀಕ್ಷೆ (Base line survey), ಅರಿವು ಮೂಡಿಸುವ ಕಾರ್ಯಕ್ರಮಗಳಾದ ಗೋಡೆ ಬರಹ, ಜಾಥಾ, ಕರಪತ್ರ ಮತ್ತು ಇತರೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಾಗೂ ಸಮುದಾಯ ಆಧಾರಿತ ಗುಂಪುಗಳಾದ ಸ್ವಸಹಾಯ ಗುಂಪು (SHGs) ಬಳಕೆದಾರರ ಗುಂಪು (UGs) ಮತ್ತು ಜಲಾನಯನ ಸಮಿತಿಗಳನ್ನು (ECs) ರಚಿಸುವುದು ಮತ್ತು ಅವುಗಳಿಗೆ ತರಬೇತಿಗಳನ್ನು ಕೇಂದ್ರ ಕಛೇರಿಯಿಂದ ಯೋಜನೆಗಳಿಗೆ ನಿಯೋಜಿಸಲಾಗುವ ಸರ್ಕಾರೇತರ ಸಂಸ್ಥೆಗಳ ಸಹಾಯದಿಂದ **ಆಗಸ್ಟ್ ಮತ್ತು ಸೆಪ್ಟೆಂಬರ್-2020 ರ ಮಾಹೆಯಲ್ಲಿ** ಕೈಗೊಳ್ಳುವುದು.

5. ನಂತರ ಅಕ್ಟೋಬರ್–2020 ರ ಮಾಹೆಯಲ್ಲಿ ನಿವ್ವಳ ಯೋಜನೆ ಮತ್ತು ವಿಸ್ತೃತ ಯೋಜನಾ ವರದಿಯನ್ನು (**DPR**) ಸಂಪೂರ್ಣ ಜಲಾನಯನ ಉಪಚಾರಕ್ಕೆ (Complete Saturation) MGNREGA, PMKSY ಮತ್ತು ಇತರೆ ಯೋಜನೆಗಳೊಂದಿಗೆ ಒಗ್ಗೂಡಿಸಿ ತಯಾರಿಸುವುದು.

6. ನವೆಂಬರ್–2020 ರ ಮಾಹೆಯಲ್ಲಿ **ವಿಸ್ತೃತ ಯೋಜನಾ** ವರದಿಯನ್ನು (**DPR**) ಜಿಲ್ಲಾ ಮಟ್ಟದಲ್ಲಿ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯಲ್ಲಿ (**DLTC**) ಪರಿಶೀಲಿಸಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಯಲ್ಲಿ (**DLC**) ಅನುಮೋದನೆ ಪಡೆದು ನಂತರ **ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯ ಅನುಮತಿಯೊಂದಿಗೆ** ಜಲಾನಯನದ ಮೇಲ್ ಸ್ಥರದಿಂದ MGNREGA, PMKSY ಮತ್ತು ಇತರೆ ಕಾರ್ಯಕ್ರಮಗಳೊಂದಿಗೆ ಒಗ್ಗೂಡಿಸಿ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡಲು ಅಗತ್ಯ ಕ್ರಮವಹಿಸುವುದು.

7. ವಿಸ್ತೃತ ಯೋಜನಾ ವರದಿಯನ್ನು ಸಂಪೂರ್ಣ ಜಲಾನಯನ ಉಪಚಾರಕ್ಕೆ (for the Complete saturation) ವಿವಿಧ ಮೂಲಗಳ ಸಂಪನ್ಮೂಲಗಳನ್ನು ಬಳಸಿಕೊಂಡು ತಯಾರಿಸಲು ಅಗತ್ಯ ಕ್ರಮವಹಿಸುವುದು.

8. ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮದಿಂದ ಪ್ರತಿ ಹೆಕ್ಟೇರ್‌ಗೆ ರೂ.12,000/- ಗಳನ್ನು ಹಾಗೂ ಉಳಿದ ಅನುದಾನವನ್ನು **ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತ್ರಿ** ಯೋಜನೆ ಮತ್ತು **ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ– ಇತರೆ ಉಪಚಾರಗಳು ಹಾಗೂ** ಇತರೆ ಕಾರ್ಯಕ್ರಮದೊಡನೆ ಒಗ್ಗೂಡಿಸಿ ಅನುಷ್ಠಾನ ಮಾಡುವುದು.

9. ಈಗಾಗಲೇ 2019–20 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಅನುಷ್ಠಾನ ಮಾಡಲಾದ **ಪ್ರವೇಶದ್ವಾರ ಚಟುವಟಿಕೆಗಳು** ಮತ್ತು ಅರಣ್ಯ ನರ್ಸರಿ ಚಟುವಟಿಕೆಗಳನ್ನು ಸಹ **ವಿಸ್ತೃತ ಯೋಜನಾ** ವರದಿಯಲ್ಲಿ (**DPR**) ಸೇರಿಸುವುದು.

10. **ಬಿಡುಗಡೆಯಾದ ಅನುದಾನದಲ್ಲಿ (ಅರಣ್ಯ ಘಟಕಕ್ಕೆ ಮೀಸಲಾದ ಅನುದಾನದಲ್ಲಿ) ಈಗಾಗಲೇ ಉಲ್ಲೇಖಿತ ಪತ್ರ (7) ರ ಸೂಚನೆಗಳಂತೆ ಸದರಿ ಯೋಜನೆಯಡಿ 2019–20 ನೇ ಸಾಲಿನಲ್ಲಿ ಬೆಳೆಸಲಾದ ಸಸಿಗಳನ್ನು ಯೋಜನಾ ವ್ಯಾಪ್ತಿಯ ಫಲಾನುಭವಿ ರೈತರುಗಳ ಜಮೀನುಗಳ ಕಂದಕ ಮತ್ತು ಬದುಗಳ ಮಧ್ಯೆ ಬರ್ಮ್ ಮೇಲೆ ಹಾಗೂ ಬದುಗಳ ಮೇಲೆ ಮತ್ತು ರೈತರ ಜಮೀನು ಹಾಗೂ ಸಮುದಾಯ ಪ್ರದೇಶಗಳಲ್ಲಿ MGNREGA ಒಗ್ಗೂಡಿಸುವಿಕೆ ಕಾರ್ಯಕ್ರಮದಡಿ ಗುಂಡಿಗಳನ್ನು ತೆಗೆದು ಕನಿಷ್ಠ ಶೇ.30 ರಷ್ಟು ಸಸಿಗಳನ್ನು ನಾಟಿ ಮಾಡತಕ್ಕದ್ದು. ಎಲ್ಲೆಲ್ಲಿ ಸಾಧ್ಯವಾದ್ದಲ್ಲಿ ಅಂತಹ ಕಡೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ MGNREGA ಒಗ್ಗೂಡಿಸುವಿಕೆ ಕಾರ್ಯಕ್ರಮದಡಿ ನಾಟಿ ಕಾರ್ಯ ಕೈಗೊಳ್ಳುವುದು. ಉಳಿದ ಸಸಿಗಳನ್ನು ಯೋಜನಾ ಪ್ರದೇಶದ ರೈತರಿಗೆ ಉಚಿತವಾಗಿ ವಿತರಿಸುವುದು ಹಾಗೂ ಇದಕ್ಕೆ ತಗಲುವ ಸಾಗಾಣಿಕೆ ವೆಚ್ಚವನ್ನು ನಿಯಮಾನುಸಾರ ಭರಿಸುವುದು. ಈ ಸಂಬಂಧ ಜಿಪಿಎಸ್ ಯುಕ್ತ ಛಾಯಾ ಚಿತ್ರ ಹಾಗೂ ರೈತರ ವಿವರಗಳೊಂದಿಗೆ ದಾಖಲಾತಿಗಳನ್ನು ನಿರ್ವಹಿಸುವುದು. ಪ್ರಸಕ್ತ ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಆದ್ಯತೆಯ ಮೇಲೆ 2019–20 ನೇ ಸಾಲಿನಲ್ಲಿ ಬೆಳೆಸಲಾದ ಸಸಿಗಳ ನಾಟಿ ಕಾರ್ಯವನ್ನು ಕೈಗೊಂಡು ಮುಕ್ತಾಗೊಳಿಸುವುದು.**

11. 2020–21 ನೇ ಸಾಲಿನಲ್ಲಿ ಉಲ್ಲೇಖ (4) ರ ಅನುಮೋದನೆಯಂತೆ ಅನುಷ್ಠಾನ ಮಾಡಬೇಕಾದ ಚಟುವಟಿಕೆಗಳ ವಿವರಗಳನ್ನು *ಅನುಬಂಧ–2 ರಲ್ಲಿ* ಲಗತ್ತಿಸಿದೆ.

12. **ವಿಸ್ತೃತ ಯೋಜನಾ ವರದಿ (DPR)** ತಯಾರಿಸುವ ಮುನ್ನ 2020-21 ನೇ ಸಾಲಿನಲ್ಲಿ ***ಅನುಬಂಧ-2*** ಪ್ರಕಾರ ಅನುಷ್ಠಾನ ಮಾಡುವ ಎಲ್ಲಾ ಕಾರ್ಯಕ್ರಮಗಳಿಗೆ/ಚಟುವಟಿಕೆಗಳಿಗೆ **ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಯಲ್ಲಿ (DLC)** ಕಡ್ಡಾಯವಾಗಿ ಅನುಮೋದನೆ ಪಡೆದು ಸದರಿ ಸಭೆಯ ನಡವಳಿಗಳನ್ನು ಕೇಂದ್ರ ಕಛೇರಿಗೆ ದಿನಾಂಕ: 15.8.2020 ರೊಳಗೆ ಸಲ್ಲಿಸುವುದು.
13. ಔರದ್ ತಾಲ್ಲೂಕು, ವಿಜಯಾಪುರ ತಾಲ್ಲೂಕು, ಚಾಮರಾಜನಗರ ತಾಲ್ಲೂಕು, ಗದಗ್ ತಾಲ್ಲೂಕು, ಕಲಬುರಗಿ ತಾಲ್ಲೂಕು ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ ಈಗಾಗಲೇ 41 ವಿವಿಧ ವಿಷಯಾಧಾರಿತ ಭೂ ಸಂಪನ್ಮೂಲ ಮತ್ತು ಜಲ ಸಂಪನ್ಮೂಲ ಸಮೀಕ್ಷೆಯ (Land Resource Information) ನಕಾಶೆಗಳು ತಯಾರಾಗಿದ್ದು, ಈ 6 ತಾಲ್ಲೂಕುಗಳಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ನಿಯೋಜಿಸಿದ ಕೂಡಲೇ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅನುಮೋದನೆ ಪಡೆದುಕೊಳ್ಳುವುದು.
14. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅಧೀನ ಕಛೇರಿಗಳಿಗೆ ಬಿಡುಗಡೆಯಾಗುವ ಅನುದಾನವು ಇಲಾಖೆಯು ಕೈಗೊಳ್ಳುವ ಆಂತರಿಕ ಆಡಿಟ್ ಮತ್ತು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ರವರ ಕಛೇರಿಯ ಆಡಿಟ್‌ಗೆ ಒಳಪಡುತ್ತದೆ.
15. ಮೊದಲನೇ ತ್ರೈಮಾಸಿಕಕ್ಕೆ ಬಿಡುಗಡೆ ಮಾಡಿದ ಅನುದಾನದಲ್ಲಿ ವೆಚ್ಚವನ್ನು ಭರಿಸಲು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಆಇ/02/ಟಿ.ಎಫ್.ಪಿ/2020 ದಿನಾಂಕ:30.05.2020 ಅನ್ವಯ ಕ್ರಮವಹಿಸುವುದು.
16. ಬಿಡುಗಡೆ ಮಾಡಲಾದ ಅನುದಾನದಿಂದ ಕಂಪ್ಯೂಟರ್/ಲಾಪ್‌ಟ್ಯಾಪ್/ಜೋಟೋಕಾಪಿಯರ್/ವಿಡಿಯೋ ರೆಕಾರ್ಡರ್/ಪ್ರೊಜೆಕ್ಟರ್, ಇನ್ನಿತರೆ ಯಾವುದೇ ಕ್ಯಾಪಿಟಲ್ ವಸ್ತುಗಳನ್ನು ಖರೀದಿಸಲು ಅನುಮತಿಸಲಾಗಿರುವುದಿಲ್ಲ.
17. **ಬಿಡುಗಡೆ ಮಾಡಲಾದ ಅನುದಾನದ ಆಡಳಿತ ಘಟಕದಡಿ ಕೇಂದ್ರ ಕಛೇರಿಯ ಅನುಮತಿ ಇಲ್ಲದೇ ಹೊರಗುತ್ತಿಗೆ ಮೇಲೆ ಸಿಬ್ಬಂದಿ ಮತ್ತು ವಾಹನಗಳನ್ನು ಪಡೆಯಲು ಅವಕಾಶವಿರುವುದಿಲ್ಲ.**
18. **ಬಿಡುಗಡೆ ಮಾಡಲಾದ ಅನುದಾನವನ್ನು ಖಜಾನೆಯ ಮೂಲಕವೇ ವೆಚ್ಚ ಭರಿಸಬೇಕು. ಯಾವುದೇ ಕಾರಣಕ್ಕೂ ಜಲಾನಯನ ಸಮಿತಿ, ಸ.ಕೃ.ನಿ ಮತ್ತು ಜ.ಕೃ.ನಿ ಹಂತದ ಉಳಿತಾಯ ಖಾತೆಗಳಿಗೆ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ.**
19. ಯೋಜನಾ ಅನುಷ್ಠಾನದ ಸಂಸ್ಥೆಯು (ಸಹಾಯಕ ಕೃಷಿ ನಿರ್ದೇಶಕರ ಕಛೇರಿ) ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಹಿರಿಯ ತೋಟಗಾರಿಕಾ ನಿರ್ದೇಶಕರು ವೆಚ್ಚ ಮಾಡಲಾದ ಅನುದಾನಕ್ಕೆ ವಿವರಗಳನ್ನು ಕ್ರಮಬದ್ಧವಾಗಿ ನಿರ್ವಹಣೆ ಮಾಡಬೇಕು.
20. ಮಾಸಿಕ ಪ್ರಗತಿ ವರದಿಗಳನ್ನು ಭೌತಿಕ ಮತ್ತು ಆರ್ಥಿಕ ವಿವರಗಳೊಂದಿಗೆ ಕೇಂದ್ರ ಕಛೇರಿಯಿಂದ ಒದಗಿಸಲಾದ ನಮೂನೆಗಳ ಪ್ರಕಾರ ಒದಗಿಸಬೇಕು. ಅನುಷ್ಠಾನ ಮಾಡುವ ಸಂಸ್ಥೆಯು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಕರ್ನಾಟಕ ಖಜಾನೆ ಸಂಹಿತೆಯಲ್ಲಿ ಒಳಗೊಂಡಿರುವ ನಿಯಮ ಮತ್ತು ನಿಬಂಧನೆಗಳನ್ನು ತಪ್ಪದೇ ಅನುಸರಿಸಬೇಕು.
21. 1) ಯೋಜನೆಯ ಅನುಷ್ಠಾನಕ್ಕೆ ಮುನ್ನ ಯೋಜನೆಯ ಕುರಿತು ನಾಮಪಲಕ/ಗೋಡೆಬರಹ ಬರೆಸುವುದು 2)ಕಾಮಗಾರಿ/ಚಟುವಟಿಕೆಗಳನ್ನು ಅನುಷ್ಠಾನಮಾಡಿದ ನಂತರ, ಕಾಮಗಾರಿಯ ವಿವರಗಳಾದ ಅ)ಯೋಜನೆಯ ಹೆಸರು ಆ)ಕಾಮಗಾರಿಯ ಹೆಸರು ಇ)ಅನುಷ್ಠಾನ ಮಾಡಲಾದ ವರ್ಷ ಈ)ನೀರು ಸಂಗ್ರಹಣಾ ಸಾಮರ್ಥ್ಯ ಉ)ಅಕ್ಷಾಂಶ ಮತ್ತು ರೇಖಾಂಶದ ವಿವರಗಳು ಋ)ಕಾಮಗಾರಿಯ ಅಂದಾಜು ಮೊತ್ತದ ವಿವರಗಳನ್ನು ಸಿಮೆಂಟ್‌ನಿಂದ ಪ್ಲಾಸ್ಟರಿಂಗ್ ಮಾಡುವಾಗ ಎನ್‌ಗ್ರೇವ್ ಮಾಡುವುದು ಹಾಗೂ ಪೇಂಟಿಂಗ್‌ನಲ್ಲಿ ಬರೆಯುವುದು

ಹಾಗೂ/ಅಥವಾ ಪ್ರತ್ಯೇಕವಾಗಿ ನಾಮಫಲಕವನ್ನು ಹಾಕುವುದು ಕಡ್ಡಾಯ. ಇದಕ್ಕಾಗಿ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ನಿಗಧಿಪಡಿಸಬೇಕು.

22. ಜಲಾನಯನ ಕಾಮಗಾರಿ/ಚಟುವಟಿಕೆಗಳ ಅಂತಿಮ ಸಂದಾಯಕ್ಕೆ ಮುನ್ನ ನಾಮಫಲಕ ಅಳವಡಿಸುವ ಬಗ್ಗೆ, ಗುಣಮಟ್ಟ ಮತ್ತು ಪ್ರಮಾಣದ ಬಗ್ಗೆ ಖಾತ್ರಿಪಡಿಸಿಕೊಂಡು ಅಂತಿಮ ಸಂದಾಯಕ್ಕೆ ಅನುಮೋದನೆ ನೀಡುವುದು.

23. ಸದರಿ ಯೋಜನೆಯಡಿ ಪ್ರತಿ ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗಲೇ ಒಂದು ಪ್ರತ್ಯೇಕ ಕಡತವನ್ನು ಇಟ್ಟು, ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು.

| ಕ್ರ.ಸಂ | ನಿರ್ವಹಿಸ ಬೇಕಾಗಿರುವ ದಾಖಲಾತಿಗಳು |
|---|---|
| 1 | ಕ್ಷೇತ್ರ/ಸ್ಥಳ ತಪಾಸಣಾ ವರದಿ |
| 2 | ಕಾಮಗಾರಿ/ಚಟುವಟಿಕೆ ಪೂರ್ವದ ಜಿಪಿಎಸ್‌ಯುಕ್ತ ಛಾಯಚಿತ್ರ |
| 3 | ತಾಂತ್ರಿಕ ಮಂಜೂರಾತಿ ಪಡೆದ ಆದೇಶದೊಂದಿಗೆ ಅಂದಾಜು ಪತ್ರಿಕೆ |
| 4 | ಜಿಲ್ಲಾ ಮಟ್ಟದ ಸಮಿತಿಯ ಅನುಮತಿ/ನಡವಳಿ/ಕಾರ್ಯಾದೇಶ |
| 5 | ಅಳತೆ ಪುಸ್ತಕದಲ್ಲಿ ದಾಖಲಿಸಿದ ಪ್ರತಿ |
| 6 | ಕಾಮಗಾರಿ/ಚಟುವಟಿಕೆಯ ಅನುಷ್ಠಾನ ಹಂತದ ಜಿಪಿಎಸ್‌ಯುಕ್ತ ಛಾಯಚಿತ್ರ |
| 7 | ಬಿಲ್ಸ್ ಮತ್ತು ವೋಚರ್‌ಗಳ ಪ್ರತಿ |
| 8 | ಕಾಮಗಾರಿ ಮುಕ್ತಾಯದ ವರದಿ/ಓಕೆ ಕಾರ್ಡ್ |
| 9 | ಕಾಮಗಾರಿ/ಚಟುವಟಿಕೆ ಮುಕ್ತಾಯಗೊಂಡ ನಂತರದ ಜಿಪಿಎಸ್‌ಯುಕ್ತ ಛಾಯ ಚಿತ್ರ |

**24. ಅನುಬಂಧ-1 ರಲ್ಲಿ ಘಟಕವಾರು ಬಿಡುಗಡೆ ಮಾಡಲಾದ ಅನುದಾನವನ್ನು ಇತರೆ ಯಾವುದೇ ಘಟಕಕ್ಕೆ ವರ್ಗಾಯಿಸಲು ಅವಕಾಶವಿರುವುದಿಲ್ಲ.**

25. ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ಖಜಾನೆಯಿಂದ ಆಯಾ ವರ್ಷದ ಫೆಬ್ರವರಿ ಮಾಹೆಯೊಳಗೆ ಡ್ರಾ ಮಾಡಿ, ಸರಿಯಾಗಿ ಆಗಿರುವ ಜಲಾನಯನ ಚಟುವಟಿಕೆ/ಕಾಮಗಾರಿಗಳಿಗೆ ವೆಚ್ಚ ಭರಿಸುವುದು

Rapus

**ಆಯುಕ್ತರು**
**ಜಲಾನಯನ ಅಭಿವೃದ್ಧಿ ಇಲಾಖೆ**

**ಇವರಿಗೆ,**
**ಎಲ್ಲಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ,**

ಪ್ರತಿಯನ್ನು:

ಮುಖ್ಯ ಲೆಕ್ಕಾಧಿಕಾಗಳು, ಕೇಂದ್ರ ಕಛೇರಿ ರವರಿಗೆ ಕಳುಹಿಸುತ್ತಾ ಜಿಲ್ಲೆಗಳಿಗೆ ಈ ದಿನವೇ ಅನುದಾನವನ್ನು ಬಿಡುಗಡೆಗೊಳಿಸಿ, ಅಪ್‌ಲೋಡ್ ಮಾಡುವುದು ಹಾಗೂ ಜಿಲ್ಲೆಗಳಿಗೆ ಅನುದಾನ ಜಮೆ ಆದ ಬಗ್ಗೆ ಖಾತ್ರಿಪಡಿಸಿಕೊಂಡು ಆಯುಕ್ತರಿಗೆ ವರದಿ ನೀಡಲು ಸೂಚಿಸಿದೆ.